<u>**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು**</u>

<u>**ಹುಕ್ಕೇರಿ.**</u>

CC No. 384/2020

CW- 1/ PW- 1

ಹೆಸರು : ಖಾಜಾಸಾಬ ಬಾಬುನಾಯಕವಾಡಿ

ವಯಸ್ಸು : 34 ವರ್ಷ

ಉದ್ಯೋಗ : ಕೆ ಎಸ್ ಆರ ಟಿ ಸಿ ಬಸ್ ಚಾಲಕ

ವಾಸಸ್ಥಳ : ಹುಕ್ಕೇರಿ.

**(ದಿನಾಂಕಃ09.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

<u>**ಪಾಟಿ ಸವಾಲುಃ ಆರೋಪಿ ಪರ ಶ್ರಿಃ U A H ವಕೀಲರಿಂದ**</u>

1. ನಾನು ಕೆ ಎಸ್ ಆರ ಟಿ ಸಿ ಯಲ್ಲಿ ಚಾಲಕ ಆಗಿದ್ದೇನೆ. ನನ್ನ ಬ್ಯಾಡ್ಜ ನಂ. 164. ಅದನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೇನೆ. ಹುಕ್ಕೇರಿ ಇಂದ ಚಿಕ್ಕೋಡಿ ಹೋಗುವ ದಾರಿಯಲ್ಲಿ ಚಿಕ್ಕೋಡಿ ರಸ್ತೆಯಲ್ಲಿರುವ ಉಮೇಶ ನಗರ ಪ್ಲಾಟ ಹತ್ತಿರ ಆಗಿರುತ್ತದೆ. ಸದರಿ ಜಾಗ ಕೋರ್ಟ ಸರ್ಕಲ ನಿಂದ 1 ಕಿ.ಮೀ ಚಿಕ್ಕೋಡಿ ರಸ್ತೆಯಲ್ಲಿ ಬರುತ್ತದೆ. ಸದರಿ ಘಟನೆ ಆದ ಹಿಂದಿನ ದಿನ ನನ್ನ ಡ್ಯೂಟಿ ಚಾಲು ಆಗಿತ್ತು, ನಮಗೆ 2 ದಿನ ಕಂಟ್ಯೂನಿಯಸ್ ಡ್ಯೂಟಿ ಇರುತ್ತದೆ. ಡಿಪೋ ಇಂದ ಬಸ್ ಹೊರಗಡೆ ಬರುವಾಗ ಬಸ್ ನಂಬರ್ ನಮೂದು ಮಾಡಿಯೇ ಹೋರಗೆ ಬರುತ್ತೆವೆ ಎಂದರೆ ನಿಜ. ಅದರ ಜೊತೆ ಲಾಗ್ ಶೀಟ್ ಕೊಟ್ಟಿರುತ್ತಾರೆ ಎಂದರೆ ನಿಜ. ಅದರಲ್ಲಿ ಮಾರ್ಗ ಮತ್ತು ಎಲ್ಲ ಮಾಹಿತಿ ಇರುತ್ತದೆ ಎಂದರೆ ನಿಜ. ಡಿಪೋ ಇಂದ ಬಸ್ ಹೊರಗಡೆ ಬಂದಾಗ ಕಂಟ್ರೋಲ್ ಕಡೆ ಎಂಟ್ರಿ ಮಾಡಿಸುತ್ತೇವೆ ಎಂದರೆ ನಿಜ. ಯಾವ ದಿನ ಡ್ಯೂಟಿ, ಎಷ್ಟು ಗಂಟೆಗೆ ಶುರು ಆಯಿತು ಎಂದು ಅದರಲ್ಲಿ ನಮೂದು ಇರುತ್ತದೆ ಎಂದರೆ ನಿಜ. ಹಿಂದಿನ ದಿನ ಬೆಳಗ್ಗೆ 9-00 ಗಂಟೆಗೆ ಡ್ಯೂಟಿ ಶುರುವಾಗಿ ಮರುದಿನ ಸಂಜೆ 6-45 ಕ್ಕೆ ನನ್ನ ಡ್ಯೂಟಿ ಮುಗಿಯುತ್ತದೆ. ನನ್ನ ಪಿರ್ಯಾದಿಯಲ್ಲಿ ಡ್ಯೂಟಿ ಚಾಲು ಹಾಗೂ ಕೊನೆಯಾಗುವ ಸಮಯ ಹೇಳಿಲ್ಲ ಎಂದರೆ ನಿಜ. ಸದರಿ ನನ್ನ ಡ್ಯೂಟಿ ಸಮಯವನ್ನು ಪಿರ್ಯಾದಿಯಲ್ಲಿ, ನನ್ನ ಸ್ವ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನಿಜ. ಬಸ್ ನಂಬರ್ ಸಹ ನಮೂದು ಮಾಡಿಲ್ಲ ಎಂದರೆ ನಿಜ. ಆರೋಪಿ ಆ ದಿನ ಓಡಿಸುತ್ತಿದ್ದ ಮೋಟರ್ ಸೈಕಲ್

ನಂಬರ್ ನನಗೆ ಹೇಳಲು ಬರುವುದಿಲ್ಲ. ನಾನು ಆದಿನ ಎಲ್ಲೆಲ್ಲಿ ಡ್ಯೂಟಿ ಮಾಡಿದ್ದೇನೆ ಎಂದು ಪಿರ್ಯಾದಿಯಲ್ಲಿ ಮತ್ತು ಸಾಕ್ಷಿಯಲ್ಲಿ ಬರೆಸಿಲ್ಲ ಎಂದರೆ ನಿಜ. ನಾನು ಆ ದಿನ ಮಧ್ಯಾಹ್ನ 3-30ಕ್ಕೆ ಹುಕ್ಕೇರಿ ಬಸ್ ನಿಲ್ದಾಣದಿಂದ ಗಾಡಿ ಬಿಟ್ಟಿದ್ದು 5 ನಿಮಿಷದ ಅಂತರದಲ್ಲಿ ಈ ಘಟನೆ ಆಗಿರಬಹುದು. ನಾನು ಲಾಗ್ ಶೀಟ್ ಅನ್ನು ಪಿರ್ಯಾದಿ ಜೊತೆಗೆ ಸಲ್ಲಿಸಿಲ್ಲ. ಘಟನೆ ಆದಾಗ ನಾನು ಆಸ್ಪತ್ರೆಗೆ ಅಡ್ಮಿಟ್ ಆಗಿದ್ದೆ. ಲಾಗ್ ಶೀಟ ಕಂಡಕ್ಟರ್ ಹತ್ತಿರ ಇತ್ತು. ಆದ್ದರಿಂದ ಅದನ್ನು ಹಾಜರುಮಾಡಿಲ್ಲ ಎಂದು ಹೇಳುತ್ತಾರೆ. ನಾನು ಲಾಗ್ ಶೀಟ್ ಹಾಜರುಮಾಡಿಲ್ಲದ ಕಾರಣ ಈ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಖೊಟ್ಟಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದಿನ ಬಸ್ ಚಿಕ್ಕೋಡಿಗೆ ಹೋಗುತ್ತಿತ್ತು. ಬಸ್ ನಲ್ಲಿ 15-20 ಜನ ಪ್ರಯಾಣಿಕರಿದ್ದರು. ಎಲ್ಲಾ ಪ್ರಯಾಣಿಕರು ಎಲ್ಲಿಗೆ ಹೋಗುತ್ತಿದ್ದರು ಎಂದು ಕಂಡಕ್ಟರ್ ಗೆ ಮಾಹಿತಿ ಇರುತ್ತದೆ. ಲಾಗ್ ಶೀಟ್ ಅನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರಲಿಲ್ಲ. ಆರೋಪಿ ಮುಂಚೆ ಪರಿಚಯ ಇರಲಿಲ್ಲ. ಈ ಘಟನೆ ಆದ ನಂತರ ಪರಿಚಿತನಾದ. ನನಗೆ ಆರೋಪಿ ಪರಿಚಯ ಇದ್ದಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸ್ವಂತ ಊರು ಹುಕ್ಕೇರಿ. ನನಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ. ನಾನು ಮತ್ತು ಆರೋಪಿ ಸೇರಿ 5-6 ವರ್ಷಗಳ ಹಿಂದೆ ಪಂಚಿಕೆ ಮಾಡಿ ಯಾವುದೇ ಪ್ರಕರಣ ಬಗೆಹರಿಸಿಲ್ಲ. ಬಸ್ ನಲ್ಲಿದ್ದ ಪ್ರಯಾಣಿಕರು ಗಾಡಿ ಇಳಿದು ಬಂದರು. ಅವರ ಹೆಸರನ್ನು ಪಿರ್ಯಾದಿಯಲ್ಲಿ ಬರೆಸಿಲ್ಲ. ಕೆಲವೊಂದು ಜನ ಪ್ರಯಾಣಿಕರು ಕೆಳಗೆ ಇಳಿದು ಬಂದರು. ಅವರಲ್ಲಿ ಕೆಲವೊಬ್ಬರ ಹೆಸರು ಬರೆಸಿದ್ದೇನೆ. ಈಗ ಅವರ ಹೆಸರು ನನಗೆ ನೆನಪಿಲ್ಲ. ಆ ದಿನ ಕಂಡಕ್ಟರ್ ಟಿಕೆಟ್ ಮಾಡುತ್ತಿದ್ದರು, ನಾನು ಕೆಳಗಡೆ ಬಿದ್ದಾಗ ಅವರು ಸಹ ಅಲ್ಲಿಗೆ ಬಂದರು. ಕಂಡಕ್ಟರ್ ಬಂದಾಗ ನಾನು ಡ್ರೈವರ್ ಬಾಗಿಲಿನ ಟೈರ್ ಹತ್ತಿರ ಬಿದ್ದಿದ್ದೆ. ಕಂಪ್ಲೆಂಟ್ ಕೊಟ್ಟ ನಂತರ ನಾನು ಆಸ್ಪತ್ರೆಯಲ್ಲಿದ್ದಾಗ ಒಬ್ಬ ಪಿಸಿ ಬಂದರು. ಪೊಲೀಸರು ಡೈರಿಯಲಿ ಬರೆದುಕೊಂಡು ನಂತರ ನಮ್ಮ ಹತ್ತಿರ ಬರುತ್ತಾರೆ ಎಂದರೆ ಇರಬಹುದು. ಕಂಡಕ್ಟರ್ ನ ಹೇಳಿಕೆ ಪಡೆದುಕೊಂಡ ನಂತರ ಪೊಲೀಸರು ಬರುತ್ತಾರೆ ಎಂದರೆ ಇರಬಹುದು. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ, ಆದಿನ ನಾನು ಆಸ್ಪತ್ರೆಯಲ್ಲಿ ಇದ್ದೆ ಎಂದು ಹೇಳುತ್ತಾರೆ. ಅದನ್ನು ನಾನು ಎಲ್ಲಿಯೂ ಹೇಳಿಲ್ಲ ಮತ್ತು ಸಾಕ್ಷಿಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಆ ದಿನ ಘಟನೆ ಆಗಿಲ್ಲ, ನಾನು ಪೊಲೀಸ್ ಠಾಣೆಗೆ ಹೋಗಿ ಕಂಪ್ಲೆಂಟ ಕೊಟ್ಟಿಲ್ಲ

ಎಂದರೆ ಸರಿಯಲ್ಲ. ಘಟನೆ ಆದಾಗ ಲಿಗಮೆಂಟ ಕಟ್ ಆಗಿದೆ ಎಂದು ಹೇಳಿದ್ದು, ಈ ವಿಚಾರ ನಾನು ಕೆ ಎಲ್ ಇ ಆಸ್ಪತ್ರೆಗೆ ದಾಖಲಾದಾಗ ಅಲ್ಲಿ ವೈದ್ಯರು ಎಂ.ಅರ್ ಐ ಸ್ಕ್ಯಾನ್ ಮಾಡಿದ ನಂತರ ಗೊತ್ತಾಯಿತು. ಹೊಡೆದಾಟ ಬಡಿದಾಟದಲ್ಲಿ ಲಿಗ್ ಮೆಂಟ್ ಕಟ ಆಯಿತು ಎಂದು ವೈದ್ಯರ ಪ್ರಮಾಣಪತ್ರ ಹಾಜರು ಮಾಡಿಲ್ಲ. ಲಿಗ್ ಮೆಂಟ್ ಕಟ್ ಆಗಿದೆ ಎಂದು ಪ್ರಮಾಣಪತ್ರ ಕೊಟ್ಟಿದ್ದಾರೆ ಆದರೆ ಹೊಡೆದಾಟದಲ್ಲಿ ಕಟ್ಟಾಗಿದೆ ಎಂದು ಕೊಟ್ಟಿಲ್ಲ ಎಂದು ಹೇಳುತ್ತಾರೆ. ನನ್ನ ಬಲಗಾಲಿನ ಮೊಣಕಾಲಿನಲ್ಲಿ ಲಿಗ್ ಮೆಂಟ್ ಕಟ್ ಆಗಿದೆ. ಕೆ ಎಲ್ ಇ ಆಸ್ಪತ್ರೆಯಲ್ಲಿ ಎಂ.ಅರ್ ಐ ಸ್ಕ್ಯಾನ್ ಮಾಡಿದ ರಿಪೋರ್ಟ ಹಾಜರುಮಾಡಿಲ್ಲ ಎಂದರೆ ನಿಜ. ನಾನು KSRTC ಇಂದ ಪರಿಹಾರ ಕೇಳಲು ಲೇಬರ್ ಕೋರ್ಟ್ ಗೆ ಹೋಗಿಲ್ಲ. KSRTC ಅಧಿಕಾರಿಗಳಿಗೆ ನಾನು ರಜೆ ಬೇಡಿ ಅರ್ಜಿ ಕೊಟ್ಟಿದ್ದೇನೆ. ಆ ರಜೆ ಅರ್ಜಿ ನಾನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ. ಘಟನೆ ಆದಾಗ ನಾನು ಹುಕ್ಕೇರಿ ಸರ್ಕಾರಿ ಆಸ್ಪತ್ರೆಗೆ ಮೊದಲು ಹೋದೆ. ಲಿಗ್ ಮೆಂಟ್ ಕಟ್ ಆದ ಬಗ್ಗೆ ಕಾಲಿನಲ್ಲಿ ರಕ್ತ ಬಂದಿರಲಿಲ್ಲ ಆದರೆ ಬಾಯಿಯಿಂದ ರಕ್ತ ಬರುತ್ತಿತ್ತು. ಹುಕ್ಕೇರಿ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನನ್ನು ದಾಖಲು ಮಾಡಿದಾಗ ಕಂಡಕ್ಟರ್ ಆದಂತಹ ಘಟನೆಯಲ್ಲಿ ವೈದ್ಯರಿಗೆ ಹೇಳಿದರು, ಅಲ್ಲಿ ಅವರು ಏನು ಬರೆದುಕೊಂಡರು ನನಗೆ ಗೊತ್ತಿಲ್ಲ. ವೈದ್ಯರು ಪೆಟ್ಟಾಗಿರುವುದನ್ನು ನೋಡಿ ಚಿಕಿತ್ಸೆ ಕೊಡುತ್ತಾರೆ ಎಂದರೆ ನಿಜ. ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ಗೊತ್ತಿಲ್ಲ. ಸರ್ಕಾರಿ ಆಸ್ಪತ್ರೆ ವೈದ್ಯರು ಕೆ ಎಲ್ ಇ ಆಸ್ಪತ್ರೆಗೆ ಬರೆದುಕೊಟ್ಟ ಬಗ್ಗೆ ಆ ಚೀಟಿ ಅಥವಾ ಮೆಡಿಕಲ್ ಸರ್ಟಿಪಿಕೇಟ್ ಇದೆಯಾ ಎಂದರೆ ಸಾಕ್ಷಿ ಆ ಸಮಯದಲ್ಲಿ ನನಗೆ ಪ್ರಜ್ಞೆ ಇರಲಿಲ್ಲ, ಈಗ ಎಲ್ಲಿದೆಯೋ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಜೊತೆ ಆ ಸಮಯದಲ್ಲಿ ಇಬ್ಬರು ಸ್ನೇಹಿತರು ಇದ್ದರು, ಅವರಿಗೆ ಕೊಟ್ಟಿರಬಹುದು. ಹೆಚ್ಚಿನ ಚಿಕಿತ್ಸೆಗಾಗಿ ಕೆ ಎಲ್ ಇ ಆಸ್ಪತ್ರೆಗೆ ಸರ್ಕಾರಿ ವೈದ್ಯರು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿ ಪ್ರಮಾಣಪತ್ರ ಕೇಳಿಲ್ಲ. ಅದನ್ನು ಕೇಳಲು ನನಗೆ ಅಡಚಣೆ ಇರಲಿಲ್ಲ. ಸಾಕ್ಷಿ ನನಗೆ ಚಿಕಿತ್ಸೆ ನಂತರದಲ್ಲಿ ದಿಯಾ ಆಸ್ಪತ್ರೆಯಲ್ಲಿ ಆಗಿರುತ್ತದೆ ಎಂದು ಹೇಳುತ್ತಾರೆ. ನನ್ನ ಬಸ್ ನಂಬರ್ ಕೆಎ 23 ಎಫ 905 ಅಥವಾ 906. ಅದನ್ನು ಪಿರ್ಯಾದಿಯಲ್ಲ ಬರೆಸಿಲ್ಲ ಮತ್ತು ಸಾಕ್ಷಿಯಲ್ಲಿ ಹೇಳಿಲ್ಲ ಎಂದರೆ ನಿಜ. ಸದರಿ ಮೋಟರ್ ಸೈಕಲ್ ನಂಬರ್ ಏನಿತ್ತು ಎಂದು ನೋಡಲು

ಅಡಚಣೆ ಏನು ಇತ್ತು ಎಂದರೆ ಸಾಕ್ಷಿ ಸದರಿ ಗಾಡಿ ಹಳೆಯ ಗಾಡಿ ಆಗಿತ್ತು ಅದು ಯಮಹಾ ಅಥವಾ ಯಜಡಿ ಕಂಪನಿಯದ್ದಾಗಿತ್ತು.

**ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**Sd/-**
**(ಆದಿತ್ಯ ಆರ್. ಕಲಾಲ್)**
**ಸಿ ಜೆ ಮತ್ತು ಜೆ.ಎಂ.ಎಫ್.ಸಿ, ಹುಕ್ಕೇರಿ.**